ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ11-11-2025 ರಂದು ಬೊಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎನ್ ಎಚ್ ವಕೀಲರಿಂದಃ

ನಾನು ಈ ದಾವೆಯನ್ನು ಕೊಂಡ್ಲಿ ಗ್ರಾಮದ ಸರ್ವೆ ನಂ 500/1ಬ ಗೆ ಸಂಬಂದಿಸಿದಂತೆ ಸಲ್ಲಿಸಿರುತ್ತೇನೆ. ಈ ದಾವೆಯನ್ನು ಪ್ರತಿವಾದಿಯ ವಿರುದ್ಧ ಬಾಡಿಗೆ ಬಾಕಿ ಮತ್ತು ಮನೆ ಖಾಲಿ ಮಾಡುವ ಬಗ್ಗೆ ಪರಿಹಾರ ಕೋರಿ ಸಲ್ಲಿಸಿರುತ್ತೇನೆ.

2. ದಾವಾಸ್ತಿ ನನ್ನ ಅಜ್ಜನ ಮೂಲಕ ನನಗೆ ಬಂದಿರುತ್ತದೆ. ಪ್ರತಿವಾದಿ ದಾವಾಸ್ತಿಯಲ್ಲಿ 1990 ಕ್ಕಿಂತ 15-20 ವರ್ಷ ಪೂರ್ವದಿಂದಲೂ ದಾವಾಸ್ತಿಯಲ್ಲಿ ಬಾಡಿಗೆ ಆಧಾರದ ಮೇಲೆ ಇರುತ್ತಾರೆ.

3. ಪ್ರತಿವಾದಿ ದಾವಾಸ್ತಿಯಲ್ಲಿ 1990 ರ ವರೆಗೆ ಮಾತ್ರ ಬಾಡಿಗೆ ಆಧಾರಮೇಲೆ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ.

4. ಫಾತಿಮಾ ಬಿ ಕೊಂ ಖರೀಮ್ ಸಾಬ್ ನನ್ನ ಅಜ್ಜಿ. ನನ್ನ ಅಜ್ಜಿ ಫಾತಿಮಾ ಬಿ ಕೊಂ ಖರೀಮ್ ಸಾಬ್ ರವರು ದಾವಾಸ್ತಿಯನ್ನು 1990 ರಲ್ಲಿ ಮಾರಾಟ ಮಾಡಿ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

5. ದಿಃ 01-01-1991 ರಿಂದ ಪ್ರತಿವಾದಿ ದಾವಾಸ್ತಿಯಲ್ಲಿ ಮಾಲೀಕನಾಗಿರುತ್ತಾನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**